ಹಿಂದೆ ಯಾವುದೋ ಒಂದು ಊಟಕ್ಕೆ ಹೋದಾಗ ಕವಿಗೆ ನಿರಾಶೆಯಾಗಿತ್ತು. ಯಾಕೆಂದರೆ, ಅದು ದೇವರ ಕಾರ್ಯವಾಗಿದ್ದರಿಂದ ಜನ ಹೆಚ್ಚಾಗಿ ಬಂದಿದ್ದರು. ಕುಯ್ದ ನಾಕು ಮರಿಗಳ ಬಾಡು ಆ ಜನಕ್ಕೆ ಎಲ್ಲೆಲ್ಲಿಗೂ ಆಗಲ್ಲ ಎಂದು ಭವಿಷ್ಯ ನುಡಿದಿದ್ದ ಬಟ್ಟ, ಯಾರನ್ನೂ ತನ್ನ ಒಲೆ ಹತ್ತಿರ ಬಿಟ್ಟುಕೊಂಡಿರಲಿಲ್ಲ. ಒಲೆ ಹತ್ತಿರ ಜನ ಬಂದರೆ ತೋಡಿತೋಡಿ ಬಾಡಾಕಿಕೊಂಡು ಮರೆಗೋಗಿಬಿಡುತ್ತಾರೆ. 'ಅಂತಿ ಮೇಲೆ ಎಷ್ಟು ಜನ ಬೇಕಾದ್ರು ಸಂಭಾಳಿಸಬಹುದು. ಈ ಒಲೆತಕೆ ಬರ್ರ್ನ ಅವೈಡ್ ಮಾಡಬೇಕು' ಎಂದು ಗೈಡೆಂಸ್ ಕೊಟ್ಟಿದ್ದ. ಅದರಂತೆ ಅಂತಿಯಲ್ಲಿ ಕೂತ ಬ್ಯಾಲಳ್ಳಿ ಚಲಪತಿಗೆ ಅವತ್ತು ಬಾಡು ಸಂದಿಸಿರಲಿಲ್ಲ. ಎಲ್ಲೋ ತೇಲಿಸಿ ಎರಡು ತುಂಡು ಬಿದ್ದಿದ್ದವು. ಅದನ್ನೇ ಮತ್ತೆಮತ್ತೆ ನವಣಿ ಇಕ್ಕಿದ್ದ. ವಿಚಿತ್ರವೆಂದರೆ ಅವತ್ತು ತನ್ನ ಎದುರಿಗೆ ಊಟಕ್ಕೆ ಕೂತಿದ್ದವನೊಬ್ಬ ತನ್ನ ಪಕ್ಕದಲ್ಲಿ ಎರಡು ಸಣ್ಣ ಹುಡುಗರನ್ನ ಕೂರಿಸಿಕೊಂಡಿದ್ದ. ಆ ಹುಡುಗರು ಬಾಡು ಬೇಡ ಎಂದವ್ರೋ ಏನೋ ಅವರ ತಟ್ಟೆಯ ಬಾಡುಗಳನ್ನು ಬಳಿದುಕೊಂಡು ಇವನೇ ತಿನ್ನುತ್ತಿದ್ದ. ಆ ಅಂತಿಯಲ್ಲಿ ಎಲ್ಲರಿಗೂ ಬಾಡು ಶಾರ್ಟೇಜ್ ಬಂದರೂ ಆ ಭೂಪ ಮಾತ್ರ ಪ್ಲಾನ್ ಮಾಡಿ ಆ ಬಾಲಕರ ಬಾಡನ್ನ ತಾನೇ ತಿಂದು ಸಂತೃಪ್ತನಾಗಿದ್ದ. ಈ ಮಕ್ಕಳಿಗೆ ಟಗರವು, ಓತದವು ತುಂಡುಗಳು ರುಚಿಸಲ್ವೇನ, ಅವು ಚಿಕನ್ ಕಬಾಬ್, ಲಾಲಿಪಪ್ ಅಂತ ರುಚಿ ಬಿದ್ದಿರ್ತವೆ.

ಈ ಫ್ಲಾಷ್‌ಬ್ಯಾಕ್ ನೆನಪು ಮಾಡಿಕೊಂಡ ಕವಿ ಇವತ್ತು ಇದೇ ತಂತ್ರವನ್ನ ನಾನೂ ಅನುಸರಿಸಿ ಸರಿಯಾಗಿ ಬಾಡು ತಿನ್ನಬೇಕೆಂದು ಒಳಗೇ ಎಜೀಪ್ ಹಾಕಿಕೊಂಡ. ಅವತ್ತು ಚಲಪತಿಗೆ ಕಂಪನಿ ಕೊಡಲು ಬೇರೆ ಯಾರೂ ಇದ್ದಂತಿರಲಿಲ್ಲ. ಅದಕ್ಕಾಗಿ ಕವಿ ಮುಂದಾಲೋಚನೆ ಓಡಿಸಿ, ಒಂದಿಬ್ಬರು ಎಳೆಯ ಹುಡುಗರನ್ನ ಪಕ್ಕ ಕೂರಿಸಿಕೊಂಡು 'ಬರ್ರ್ರೊ ಇಲ್ಲಿ ನಿಮಗೆ ಒಂದು ಹಾಡು ಹೇಳ್ಕೊಡ್ತಿನಿ' ಎಂದು ಅವರೊಂದಿಗೆ ಕಾಲ ಕಳೆಯುತ್ತಿದ್ದ. ಊಟದ ಪಂತಿಗಳು ಭರ್ತಿಯಾಗತೊಡಗಿದವು. ಸುಮಾರು ಮೂರು ಗಂಟೆಯವರೆಗೂ ಕಾದಿದ್ದ ಜನ ಒಳಗೆ ಶಂಕ, ಜಾಗಟೆಯ ಸದ್ದಾದದ್ದೇ ತಡ ಬಂದು ಟೇಬಲ್ ಹಿಂದೆ ಕುರ್ಚಿ ಎಳೆದುಕೊಂಡು ಊಟಕ್ಕೆ ಕೂತೇಬಿಟ್ಟರು. ಕವಿಯೂ ಯಾಮಾರದೆ ಹುಡುಗರನ್ನ 'ಬರ್ರ್ರೊ ಪಾಪ ನೀವೇ ನನ್ನೊತೆ ಇವತ್ತ ಕಂಪನಿ' ಅಂತ ಅಲುಗಾಡದಂತೆ ಆಕಡೆ ಈಕಡೆ ಕೂರಿಸಿಕೊಂಡು ಮಧ್ಯದಲ್ಲಿ ತಾನು ಕೂತ. ಕವಿ ಬ್ಯಾಲಳ್ಳಿ ಚಲಪತಿ ನಮ್ಮ ಜೊತೆ ಕೂತಿದ್ದಾರೆಂಬ ಗೌರವ ಅಲ್ಲಿದ್ದವರಿಗೆಲ್ಲ ಇತ್ತಾದರೂ ಬಾಡಿನಲ್ಲಿ ಯಾರೂ ರಾಜಿಯಾಗರು. ಇವರಿಗೆ ಹೆಚ್ಚಿಗೆ ಬಾಡಾಕಿ ಎಂದು ಅಂತಿ ಮೇಲೆ ಯಾರೂ ಇನ್‌ಫ್ಲುಯೆನ್ಸ್ ಮಾಡುವಂತಿಲ್ಲ. ಅದು ಅಂತಿಗೆ ಮಾಡುವ ದ್ರೋಹವೆಂಬುದು ನಿಯಮ. ಇದರ ಅನುಸಾರ ಅಲ್ಲಿ ಕವಿಯೂ ರಾಜಕಾರಣಿಯೂ ಹೆಂಗಸೂ ಮಕ್ಕಳೂ ಎಲ್ಲಾ ಒಂದೇ.

ಮೊದಲಿಗೆ ಎಲೆ ಮೇಲೆ ನೀರು, ಉಪ್ಪು,

